**ದಿನಾಂಕಃ 30-09-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಾದ ಶ್ರೀ ಡಿ.ಬಿ.ಎ ವಕೀಲರಿಂದಃ**

ದಾವಣಗೆರೆ ಜಿಲ್ಲೆಯ ಆನೆಗೋಡು ಹೋಬಳಿಯ ಉಪ-ತಹಶೀಲ್ದಾರ ರವರು ನೀಡಿರುವ ನಮ್ಮ ವಂಶವೃಕ್ಷ ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದೇನೆ ಅದನ್ನು ನಿ.ಪಿ-9 ಎಂದು ಗುರುತಿಸಲಾಯಿತು.

ಭಾರತ ಸರ್ಕಾರದವರು ನೀಡಿರುವ 1 ನೇ ಅರ್ಜಿದಾರಳಾದ ನನ್ನ, 2 ನೇ ಅರ್ಜಿದಾರನಾದ ನನ್ನ ಗಂಡ ಹಾಗು ಮೃತ ನನ್ನ ಮಗ ರಾಜು ರವರ ವಿಶಿಷ್ಟ ಗುರುತಿನ ಚೀಟಿಗಳ ನೋಟರಾಜ್ಡ ಪ್ರತಿ (ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದಿರುಗಿಸಲಾಗಿದೆ) ಗಳನ್ನು ಹಾಜರು ಮಾಡಿದ್ದೇನೆ ಅವುಗಳನ್ನು ಕ್ರಮವಾಗಿ ನಿಪಿ–10 ರಿಂದ ನಿ.ಪಿ–12 ಎಂದು ಗುರುತಿಸಲಾಯಿತು.

ಭಾರತ ಸರ್ಕಾರದವರು ನೀಡಿರುವ 1 ನೇ ಅರ್ಜಿದಾರಳಾದ ನನ್ನ ಮತ್ತು 2 ನೇ ಅರ್ಜಿದಾರನಾದ ನನ್ನ ಗಂಡ ರವರ ಪಾನ್ ಕಾರ್ಡಗಳ ನೋಟರಾಜ್ಡ ಪ್ರತಿ (ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದಿರುಗಿಸಲಾಗಿದೆ) ಗಳನ್ನು ಹಾಜರು ಮಾಡಿದ್ದೇನೆ ಅವುಗಳನ್ನು ಕ್ರಮವಾಗಿ ನಿಪಿ–13 ಮತ್ತು ನಿ.ಪಿ–14 ಎಂದು ಗುರುತಿಸಲಾಯಿತು.

ಕರ್ನಾಟಕ ಸರ್ಕಾರದವರು ನೀಡಿರುವ ನಮ್ಮ ಕುಟುಂಬದ ಬಿ.ಪಿ.ಎಲ್ ಪಡಿತರ ಚೀಟಿಯ ನೋಟರಾಜ್ಡ ಪ್ರತಿ (ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದಿರುಗಿಸಲಾಗಿದೆ) ಯನ್ನು ಹಾಜರು

ಮಾಡಿದ್ದೇನೆ ಅದನ್ನು ನಿ.ಪಿ-15 ಎಂದು ಗುರುತಿಸಲಾಯಿತು.

ರಾಣೇಬೆನ್ನೂರಿನ ಕೆ.ವಿ.ಜಿ ಬ್ಯಾಂಕ್ ನಲ್ಲಿ ನನಗೆ ಮತ್ತು 2 ನೇ ಅರ್ಜಿದಾರರಿಗೆ ಖಾತೆ ಇದೆ ಎಂದು ತೋರಿಸಲು ಸದರಿ ಬ್ಯಾಂಕ್ ನ ಪಾಸ್ ಬುಕ್‌ಗಳ ನೋಟರಾಜ್ಡ ಪ್ರತಿ (ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದಿರುಗಿಸಲಾಗಿದೆ)ಗಳನ್ನು ಹಾಜರು ಮಾಡಿದ್ದೇನೆ ಅವುಗಳನ್ನು ಕ್ರಮವಾಗಿ ನಿಪಿ-16 ಮತ್ತು ನಿ.ಪಿ-17 ಎಂದು ಗುರುತಿಸಲಾಯಿತು.

ದಾವಣಗೆರೆ ಜಿಲ್ಲೆಯ ಕಂದನಕೋವಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ಅಡಿಯಲ್ಲಿ ಬರುವ ಸಿದ್ದನೂರು ಗ್ರಾಮದಲ್ಲಿ ಮೃತ ರಾಜು ಕಿರಾಣಿ ಅಂಗಡಿಯನ್ನು ನಡೆಸುತ್ತಿದ್ದರು ಎನ್ನುವ ಬಗ್ಗೆ ಕಂದನಕೋವಿ ಗ್ರಾಮ ಪಂಚಾಯಿತಿಯ ಪಿ.ಡಿ.ಓ ರವರು ನೀಡಿರುವ ಜನರಲ್ ಲೈಸನ್ಸ ನ್ನು ಹಾಜರು ಮಾಡಿದ್ದೇನೆ ಅದನ್ನು ನಿ.ಪಿ-18 ಎಂದು ಗುರುತಿಸಲಾಯಿತು.

ಅರ್ಜಿಯಲ್ಲಿ ಕೋರಿ ಕೊಂಡಂತೆ ಆದೇಶ ಆಗಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ .

**ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀ ಎಂ.ಎಂ.ಎಲ್ ವಕೀಲರಿಂದಃ**

ಸದರಿ ಅಪಘಾತದ ಸಮಯದಲ್ಲಿ 1 ನೇ ಎದುರುದಾರನ ಮಾಲೀಕತ್ವದ ಮೋಟಾರ್ ಸೈಕಲ್ ವಾಹನಕ್ಕೆ 2 ನೇ ಎದುರುದಾರನ ವಿಮಾ ಸಂಸ್ಥೆಗೆ ಒಳಪಟ್ಟ ವಿಮೆ ಚಾಲ್ತಿಯಲ್ಲಿದ್ದ ಕಾರಣಕ್ಕಾಗಿ 1 ನೇ ಎದುರುದಾರ ನಮಗೆ ಯಾವುದೇ ಪರಿಹಾರ ಮೊತ್ತ ನೀಡಲು ಬಾಧ್ಯಸ್ಥನಾಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತದ ಸಮಯದಲ್ಲಿ 1 ನೇ ಎದುರುದಾರನ ಮಾಲೀಕತ್ವದ ಮೋಟಾರ್ ಸೈಕಲ್ ವಾಹನವನ್ನು ಚಾಲನೆ ಮಾಡುತ್ತಿದ್ದ ಚಾಲಕನಿಗೆ ಚಾಲನಾ ಪರವಾನಿಗೆ ಪತ್ರ ಇತ್ತು ಹಾಗು ಅದು ಚಾಲ್ತಿಯಲ್ಲಿ ಇತ್ತು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ.

ಸದರಿ ಮೇಲೆ ಹೇಳಿದ ಕಾರಣಗಳಿಗಾಗಿ 1 ನೇ ಎದುರುದಾರ ನಮಗೆ ಯಾವುದೇ ಪರಿಹಾರ ಮೊತ್ತ ನೀಡಲು ಬಾಧ್ಯಸ್ಥನಾಗಿರುವುದಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 2</u>** ನೇ ಎದುರುದಾರರ ಪರ ವಕೀಲರಾದ ಶ್ರೀ ಎಸ್.ಎಸ್.ಕೆ ವಕೀಲರು ಸಮಯ ಬೇಡಿರುವುದರಿಂದ ಮುಂದೂಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಹಿ/–

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.